**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**
**ಸಿ ಸಿ ನಂಃ 786/24**

ಸಾಕ್ಷಿಯ ಹೆಸರುಃ ಪುಟ್ಟರಾಜು
ತಂದೆ /ಗಂಡನ ಹೆಸರು ಃ ನಾಗರಾಜು ಚಾಸಾ4
ವಯಸ್ಸು ಃ **39** ಪ್ರಾಸಾ2
ಉದ್ಯೋಗ ಃ ಖಾಸಗಿ ಕೆಲಸ
ವಾಸ ಸ್ಥಳ ಃ ಗೋಂದಿಬಸವನಹಳ್ಳಿ ಗ್ರಾಮ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 05.06.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ದಿಃ **23.01.2024** ರಂದು ನಾನು ಮತ್ತು ಚಾಸಾ **3** ರವರು ಕೆಲಸದ ನಿಮಿತ್ತ ಗಂಧದಕೋಟೆಗೆ ಬರುವಾಗ ಪೋಲಿಸರು ನಮ್ಮನ್ನು ಕರೆದು ದಿಃ **21.01.2024** ರಂದು ಅಪಘಾತವಾಗಿದ್ದು ಮಹಜರ ಮಾಡಲು ಸಹಕರಿಸಿ ಎಂದು ನಮ್ಮನ್ನು ಕೇಳಿಕೊಂಡಿರುತ್ತಾರೆ. ಆಗ ನಾವು ಒಪ್ಪಿದ ಮೇರಗೆ ನಮಗೆ ನೋಟಿಸ್ ಜಾರಿ ಮಾಡಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ಬೈನಮುರಳಿರವರಿಗೆ ಸೇರಿದ ಖಾಸಗಿ ಜಾಗದ ಸ್ವಲ್ಪ ಮುಂದೆ ಮತ್ತು ಗ್ರೀನ್ ನರ್ಸರಿಯ ಬಳಿ ಮಹಜರ ಕ್ರಮ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ನಾನು , ಚಾಸಾ **1** ಮತ್ತು ಚಾಸಾ **3** ರವರು ಇರುತ್ತಾರೆ. ಮಹಜರ ಕ್ರಮವನ್ನು ಸುಮಾರು ಬೆಳಗ್ಗೆ **11.30** ಸಮಯದಿಂದ **12.30** ಗಂಟೆ ಸಮಯದವರೆಗೆ ಜರುಗಿಸಿರುತ್ತಾರೆ. ಸಾಕ್ಷಿಗೆ ನಿಪಿ **1** ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ **1** ಬಿ ಎಂದು ಗುರುತಿಸಲಾಯಿತು.

ನಂತರ ಸ್ಥಳ ಮಹಜರ ಕ್ರಮ ಮುಗಿಸಿಕೊಂಡು ಬಂದು ಠಾಣೆಯ ಬಳಿ ಸುಮಾರು ಮದ್ಯಾಹ್ನ **1.00** ಗಂಟೆ ಸಮಯಕ್ಕೆ ಬಂದಿರುತ್ತೇವೆ. ನನ್ನ ಸಮಕ್ಷಮ ಕೆ ಎ **12** ಆರ್ **0381** ಹಿರೋ ಹೋಂಡಾ ಸ್ಪೆಂಡರ್ ಮತ್ತು ಕೆ ಎ **05** ಎ ಹೆಚ್ **7929** ಇನೋವಾ ಕಾರನ್ನು ಮಹಜರ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ವಾಹನಗಳನ್ನು ಚಾಸಾ **1** ರವರು ತೋರಿಸಿರುತ್ತಾರೆ.

ನಿಪಿ **2** ನ್ನು ಜರುಗಿಸುವ ಸಮಯದಲ್ಲಿ ನಾನು ಚಾಸಾ **1** ಮತ್ತು **3** ರವರು ಇರುತ್ತೇವೆ. ಅಮಾನತ್ತು ಮಹಜರ ಕ್ರಮವನ್ನು ಮದಾಹ್ನ **11.30** ಯಿಂದ **12.30** ಗಂಟೆ ಸಮಯದವರೆಗೆ ಜರುಗಿಸಿರುತ್ತಾರೆ . ಅಮಾನತ್ತು ಮಹಜರ ಸಮಯದಲ್ಲಿ ನನ್ನ ಸಹಿಯನ್ನು ನಿಪಿ **2** ಕ್ಕೆ ಪಡೆದಿರುತ್ತಾರೆ. ಮತ್ತು ನನ್ನ ಹೇಳಿಕೆಯನ್ನು ಪೋಲಿಸರು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ನಿಪಿ **2** ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರಿತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ **2** ಬಿ ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ ಸಿ ಎಸ್ ವಕೀಲರಿಂದ**

ನಾನು ಸ್ಥಳಕ್ಕೆ ಹೋದಾಗ ಸಾರ್ವಜನಿಕರು ಯಾರೂ ಇರುವುದಿಲ್ಲ. ನೋಟಿಸನಲ್ಲಿ ನಾವು ಈ ರೀತಿ ಮಹಜರ ಮಾಡುತ್ತೇವೆ ಮಹಜರಗೆ ಸಾಕ್ಷಿಯಾಗಿ ಸಹಿ ಹಾಕಿ ಎಂದು ಬರೆದಿರುತ್ತದೆ. ನೋಟಿಸನಲ್ಲಿ ಯಾವ ಸ್ಥಳಕ್ಕೆ ಎಷ್ಟು ಒತ್ತಿಗೆ ಬರಬೇಕೆಂದು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಬೈಮನ ಮುರಳಿ ರವರಿಗೆ ಸೇರಿದ ಖಾಲಿ ಜಾಗದ ಎದುರು ರಸ್ತೆಯಲ್ಲಿ ಸ್ಥಳ ಮಹಜರ ಮಾಡಿರುತ್ತಾರೆ. ನಿಪಿ **1** ನ್ನು ನಾವು ಹೋದ ಮೇಲೆ ಬರೆದಿರುತ್ತಾರೆ. ನೋಟಿಸನಲ್ಲಿ ಗ್ರೀನ ನರ್ಸರಿಯ ಮುಂದೆ ಮಹಜರಗೆ ಹಾಜರಾಗಿ ಎಂದು ನಮೂದಾಗಿರುತ್ತದೆ ಎಂದರೆ ಸರಿ . ನಿಪಿ **1** ರಲ್ಲಿ ಅಗಲ **25** ಅಡಿ ರಸ್ತೆ ಎಂದು ತೋರಿಸಿರುತ್ತಾರೆ. ಬೈನ ಮುರಳಿ ರವರಿಗೆ ಸೇರಿದ ಖಾಲಿ ಜಾಗದ ಎದುರು ರಸ್ತೆಯ ಮದ್ಯ ಭಾಗದಲ್ಲಿ ಅಪಘಾತವಾಗಿರುತ್ತದೆ ಎಂದು ತೋರಿಸಿರುತ್ತಾರೆ. ನಿಪಿ **1** ರಲ್ಲಿ ಅಪಘಾತ ಸ್ಥಳದ ಎಡ ಮತ್ತು ಬಲ ಭಾಗದಲ್ಲಿ ಎಷ್ಟು ಅಡಿ ಕಚ್ಚಾ ರಸ್ತೆ ಇತ್ತು ಎಂದು ತೋರಿಸಿತ್ತಾರೆ ಎಂದು ನನಗೆ ಗೊತ್ತಿಲ್ಲ.

ಅಪಘಾತದ ಸ್ಥಳದ ಯಾವ ದಿಕ್ಕಿಗೆ ಬೈಮನ ಮುರಳಿ ರವರ ಖಾಲಿ ಜಾಗ ಇತ್ತು ಎಂದು ನನಗೆ ಗೊತ್ತಿಲ್ಲ. ನಿಪಿ **1** ರಲ್ಲಿ ಬೈಮನ ಮುರಳಿ ರವರ ಖಾಲಿ ಜಾಗ ಯಾವ ದಿಕ್ಕಿಗೆ ಮತ್ತು ಎಷ್ಟು ದೂರದಲಿತ್ತು ಎಂದು ಬರೆದಿರುತ್ತಾರೆ ಎಂದು

ನನಗೆ ಗೊತ್ತಿಲ್ಲ. ನಿಪಿ **1** ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಅಪಘಾತ ಸ್ಥಳದಲ್ಲಿ ಕಾರ್ ಅಥವಾ ಬೈಕು ಹುಜ್ಜಿದ ಗುರುತುಗಳು ಮತ್ತು ವಾಹನದ ಬಿಡಿ ಭಾಗಗಳು ಬಿದಿದ್ದವಾ ಎಂದರೆ ಸಾಕ್ಷಿಯು ವಾಹನದ ಬಿಡಿ ಭಾಗಗಳು ಬಿದ್ದಿರುತ್ತವೆ ಎಂದು ನುಡಿದಿರುತ್ತಾರೆ. ನನ್ನ ಸಮಕ್ಷಮ ಯಾವುದೆ ವಾಹನಗಳ ಬಿಡಿ ಭಾಗಗಳು ವಶಪಡಿಸಿಕೊಂಡಿರುವುದಿಲ್ಲ.

ಅಪಘಾತದ ಸ್ಥಳದಿಂದ **20-30** ಮಿ ಮುಂದೆ ಮನೆಗಳು ಮತ್ತು ಕಟ್ಟಡಗಳು ಇರುತ್ತವೆ . ನನ್ನ ಸಮಕ್ಷಮ ಅಲ್ಲಿದ್ದ ಸಾರ್ವಜನಿಕರನ್ನು ಕರೆಯಿಸಿ ಮಹಜರ ಕ್ರಮ ಜರುಗಿಸಿರುವುದಿಲ್ಲ. ನಿಪಿ **1** ರಲ್ಲಿ ಚೆಕ್ಕುಬಂಧಿಯ ವಿವರಗಳು ಬರೆದಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಕಚ್ಚಾ ನಕಾಶೆಯಲ್ಲಿ ಅಪಘಾತದ ಸ್ಥಳವನ್ನು ಗುರುತು ಮಾಡಿರುತ್ತಾರೆ . ಕಚ್ಚಾ ನಕಾಶೆಯಲ್ಲಿ ಅಪಘಾತದ ಸ್ಥಳದ ಮುಂದೆ ಇರುವ ಮನೆಗಳ ಬಗ್ಗೆ ವಿವರಿಸಿರುವುದಿಲ್ಲ. ಕಚ್ಚಾ ನಕಾಶೆಯಲ್ಲಿ ರಸ್ತೆಯ ಮಧ್ಯ ಭಾಗದಲ್ಲಿ ಆದ ಅಪಘಾತ ಸ್ಥಳವನ್ನು ಗುರುತು ಮಾಡಿರುತ್ತಾರೆ . ಕಚ್ಚಾ ನಕಾಶೆಗೆ ನಾನು ಸಹಿ ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ನಾನು ಠಾಣೆಯಲ್ಲಿ ನಿಪಿ **1** ಕ್ಕೆ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸ್ಥಳದಲ್ಲಿ ಸಹಿ ಹಾಕಿರತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ **2** ರಲ್ಲಿ ಕಾರಿನ ಮುಂದಿನ ಭಾಗದ ಬಂಪರ್ ಮತ್ತು ಟೈರಿನ ಜಖಂ ಗೊಂಡಿರುವ ಬಗ್ಗೆ ಬರೆದಿರುತ್ತಾರೆ . ಅದೇ ರೀತಿ ಬೈಕಿನ ಕಿಕ್ಕರ್ ನ ಸೈಲನ್ಸರ್ ಮತ್ತು ಮಾಸ್ಕ ಜಖಂ ಗೊಂಡಿರುತ್ತದೆ ಎಂದು ನಿಪಿ **2** ರಲ್ಲಿ ಬರೆದಿರುತ್ತಾರೆ . ಅದನ್ನು ನಾನು ಸಹಿ ಹಾಕಿರುತ್ತೇನೆ . ಕಾರಿನ ಮುಂದಿನ ಗ್ಲಾಸ್ ಮೇಲೆ ಏನಾದರೂ ಅಕ್ಷರದಲ್ಲಿ ಬರೆದಿತ್ತಾ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿದಿರುತ್ತಾರೆ . ಕಾರಿನ ನಂಬರ್ ಪ್ಲೇಟ್ ಯಾವ ಕಲರ್ ಇತ್ತು ಎಂದು ನಾನು ಗಮನಿಸಿರುವುದಿಲ್ಲ. ಅದರ ವಿವರ ಮಹಜರನಲ್ಲಿ ಬರೆದಿರುವುದು ನಾನು

ನೋಡಿರುವುದಿಲ್ಲ. ಮಾಸ್ಕ ಆಗಲಿ ಇಂಡಿಕೇಟರ್ ಆಗಲಿ ನಿಪಿ 2 ನ್ನು ಜರುಗಿಸಬೇಕಾದರೆ ಇರುವುದಿಲ್ಲ. ಬೈಕಿನ ಬಲಭಾಗದ ಇಂಡಿಕೇಟರ್ ಕಟ್ ಆಗಿರುತ್ತದೆ . ಈ ವಿವರಗಳನ್ನು ನಿಪಿ 2 ರಲ್ಲಿ ನಮೂದಿಸಿರುವುದನ್ನು ನಾನು ನೋಡಿರುವುದಿಲ್ಲ. ಆ ದಿನ ನನ್ನ ಸಮಕ್ಷಮ ನಿಪಿ 2 ರಂತೆ ಯಾವುದೆ ಮಹಜರ ಮಾಡಿರುವುದಿಲ್ಲ ಹಾಗೂ ನಾನು ನಿಪಿ 2 ಕ್ಕೆ ನಾನು ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೆ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ 3 ಸಹಿಗಳನ್ನು ಹಾಕಿರುತ್ತೇನೆ ಹಾಗೂ ಠಾಣೆಯಲ್ಲಿ 3 ಸಹಿಗಳನ್ನು ಹಾಕಿರುತ್ತೇನೆ . ನಾನು ನಿಪಿ 1 ಕ್ಕೆ 3 ಸಹಿಗಳನ್ನು ಹಾಕಿರುತ್ತೇನೆ . ನಾನು ಠಾಣೆಯಲ್ಲಿ ನಿಪಿ 2 ಕ್ಕೆ 3 ಸಹಿಯನ್ನು ಹಾಕಿರುತ್ತೇನೆ. ನಾನು ಮಹಜರಗಳನ್ನು ಜರುಗಿಸುವ ದಿನದಂದೇ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಹೇಳಿಕೆಯನ್ನು ಕೈಬರವಣಿಗೆಯಲ್ಲಿ ಬರೆದಿರುತ್ತಾರೆ .

ನನ್ನ ಹೇಳಿಕೆಯಲ್ಲಿ ನಾನು ಕೃತ್ಯ ನಡೆದ ಸ್ಥಳದ ವಿವರಗಳನ್ನು ಹಾಗೂ ಆಸು ಪಾಸಿನ ಜಾಗವನ್ನು ಹೇಳಿ ಬರೆಸಿದ್ದೀರಾ ಎಂದರೆ ನಾನು ಬರೆಸಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ ಹಾಗು ಹೇಳಿಕೆಯನ್ನು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಕಾರವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.